ಶ್ರೀ ಎಸ್.ಹೆಚ್. ಕೌಜಲಗಿ:- ನನ್ನದೊಂದು ಪ್ರಶ್ನೆ ಇತ್ತು.

ಅಧ್ಯಕ್ಷರು:- ನಾನು ನಿಮ್ಮ ಪ್ರಶ್ನೆಯನ್ನು ಕೇಳಿದಾಗ ನೀವು ಹೊರಗಡೆ ಹೋಗಿದ್ದೀರಿ. ತಾವು ವಾಕ್‌ಔಟ್ ಮಾಡಿ ಹೊರಗೆ ಹೋಗಿದ್ದಿರಿ. ನಾನು ಮುಂದಿನ ಪ್ರಶ್ನೆಗೆ ಹೋಗಿದ್ದೇನೆ.

ಶ್ರೀಮಂಜುನಾಥ್ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೆ, ೫೮೦ನೇ ಪ್ರಶ್ನೆ ..... ಕುಡಿಯುವ ನೀರಿನ ಬಗ್ಗೆ ಬೋರ್‌ವೆಲ್ ಹಾಕುವುದಿದ್ದು ಇದು ಕಂದಾಯ ಮಂತ್ರಿಯವರಿಗೆ ಬರುವುದಿಲ್ಲ, ಇದು ಆರ್.ಡಿ.ಪಿ.ಆರ್. ಮಂತ್ರಿಯವರಿಗೆ ಬರುತ್ತದೆ.

ಶ್ರೀ ಎಂ.ವೈ. ಘೋರ್ಪಡೆ:- ಮಾನ್ಯ ಕಂದಾಯ ಮಂತ್ರಿಗಳಿಗೆ ಕೇಳಿರತಕ್ಕಂಥ ಪ್ರಶ್ನೆಯನ್ನು ವರ್ಗಾವಣೆ ಮಾಡಿದ್ದಾರೆಂದು ಈಗ ನನಗೆ ಗೊತ್ತಾಗಿದೆ. ಇದರಲ್ಲಿ ಕೇಳಿರತಕ್ಕಂಥ ಮಾಹಿತಿಯನ್ನು ನಾವು ಸಂಗ್ರಹಿಸಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಅಧ್ಯಕ್ಷರು:- ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ವಿಷಯ:- ತೋಟಗಾರಿಕಾ ಉತ್ಪಾನ್ನಗಳ ಸಹಕಾರ ಸಂಘ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೫೮:- (೬೩೬)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ತೋಟಗಾರಿಕಾ ರಾಜ್ಯ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಉತ್ಪಾದನೆಗಳ ಬೆಳೆಗಾರರ ಸಹಕಾರ ಸಂಘ ಲಾಭದಲ್ಲಿ ನಡೆಯುತ್ತಿದೆಯೇ (ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳ ಲಾಭ ಅಥವಾ ನಷ್ಟ ವಿವರ ನೀಡುವುದು)

ಆ) ಈ ಮೇಲ್ಕಂಡ ಸಂಘದಲ್ಲಿ ಹಣ ದುರು ಉಪಯೋಗವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಸರಕಾರ ಆ ಬಗ್ಗೆ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳೇನು? (ತಪ್ಪಿತಸ್ಥರ ಪೂರ್ಣ ವಿವರಗಳನ್ನು ನೀಡುವುದು).

ಶ್ರೀ.ವಿ. ಕೃಷ್ಣಪ್ಪ
(ತೋಟಗಾರಿಕೆ ಸಚಿವರು)

ಹೌದು. ತೋಟದ ಬೆಳಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘವು ಕಳೆದ ಎರಡು ವರ್ಷಗಳಿಂದ ಲಾಭದಲ್ಲಿ ನಡೆಯುತ್ತಿದ್ದು ೧೯೯೧-೯೨ನೇ ವರ್ಷ ನಷ್ಟವನ್ನು ಅನುಭವಿಸಿದೆ. ಮೂರು ವರ್ಷದ ಲಾಭನಷ್ಟದ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ (ಮೊತ್ತ ರೂ.ಗಳಲ್ಲಿ)

	ಲಾಭ	ನಷ್ಟ	
೧೯೮೯-೯೦	೯,೪೫,೧೫೬.೯೩	-	
೧೯೯೦-೯೧	೮,೭೬,೯೯೬.೬೩	-	
೧೯೯೧-೯೨	-	೨೯.೭೮	ಲಕ್ಷಗಳು.

ಹೌದು

ಸಂಘದಲ್ಲಿ ನಡೆದಿರುವ ಹಣ ದುರುಪಯೋಗಕ್ಕೆ ನೌಕರರಾದ ಶ್ರೀ ಕೆ.ವಿ. ವೆಂಕಟೇಶ ರೆಡ್ಡಿ ನಗದು ಗುಮಾಸ್ತರು ಮತ್ತು ಶ್ರೀ ಹೆಚ್.ಜಿ. ನಾರಾಯಣಸ್ವಾಮಿ (ಉಗ್ರಾಣ ಸಹಾಯಕ) ಇವರು ಕಾರಣರಾಗಿರುತ್ತಾರೆ. ದುರುಪಯೋಗದ ಹಣ ರೂ.೮,೮೪,೧೩೮.೦೦ ವಾಗಿರುವುದು ತಿಳಿದ ತಕ್ಷಣ ಇವರುಗಳ ಮೇಲೆ ಸಿದ್ದಾಪುರ ಪೋಲೀಸ್ ಠಾಣೆಗೆ ದೂರು ನೀಡಲಾಯಿತು.

ಪೋಲೀಸ್ ಅಧಿಕಾರಿಗಳು ಇವರಿಬ್ಬರನ್ನು ಬಂಧಿಸಿ, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ, ಪೋಲೀಸ್ ಅಧಿಕಾರಗಳು ಈ ಬಗ್ಗೆ ತನಿಖೆನಡೆಸುತ್ತಿದ್ದಾರೆ. ಸಹಕಾರಿ ಕಾಯಿದೆ ವಿಭಾಗ ೭೦ರ ಪ್ರಕಾರ ಸಹಕಾರ ಸಂಘ ನಿಬಂಧಕರವರಲ್ಲಿ ಸಿವಿಲ್ ಮೊಕದ್ದಮೆ ಹೂಡಲಾಗಿದೆ.

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಸೊಸೈಟಿಯಲ್ಲಿ ಲಾಭ ಬಂದಿದೆ ಎನ್ನತಕ್ಕ ಮಾತನ್ನು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ೯,೪೫,೧೫೬ ರೂಪಾಯಿ ಲಾಭ ಬಂದಿದೆ ಎಂದು ಫನು ಹೇಳುತ್ತಾರೆ, ಇದನ್ನು ಹೋಲಿಸಿ ನೋಡಿದಾಗ ಕಳೆದ ಮೂರು ವರ್ಷಗಳಲ್ಲಿ ಮೊದಲಿನ ಎ೧.ಡಿ.ಯವರು ಇದ್ದಾಗ ಹೆಚ್ಚಿನ ಲಾಭ ಬಂದು ಮಧ್ಯೆ ಅವರು ಬದಲಾದ ಮೇಲೆ ಆ ಲಾಭಾಂಶ ಕಡಿಮೆಯಾಗಿದೆ. ೨೫ ಲಕ್ಷ ಲಾಭ ಏನು ಬರುತ್ತಿತ್ತು ಅದು ೯ ಲಕ್ಷಕ್ಕೆ ಕಡಿಮೆಯಾಗಿದೆ. ತದನಂತರ ಈ ಸಾಲಿನಲ್ಲಿ ಮತ್ತೆ ೨೯ ಲಕ್ಷ ಲಾಭ ಬರಬೇಕಾದರೆ ಅದೇ ಸ್ಟಾಫ್, ಅದೇ ವಹಿವಾಟು ಇರುವಾಗ ಈ ರೀತಿ ವ್ಯತ್ಯಾಸ ಏಕೆ ಆಗಿದೆ ಎನ್ನುವುದರ ಬಗ್ಗೆ ಸಚಿವರನ್ನು ನಾನು ಕೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ೧೯೯೧-೯೨ನೇ ಸಾಲಿನಲ್ಲಿ ಹಾಪ್‌ಕಾಮ್ಸ್‌ನಿಂದ ವಹಿವಾಟು ೧,೭೨,೬೦೦೦ ಇತ್ತು. ಲಾಭ ೧೩ಲಕ್ಷ ಇತ್ತು. ಆದರೆ ನಮ್ಮ ಸದಸ್ಯರು ತದನಂತರ ಏಕೆ ನಷ್ಟ ಆಯಿತು ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಇದರ ಪೈಕಿ ೧೯೯೧-೯೨ನೇ ಸಾಲಿನಲ್ಲಿ ಅಲ್ಲಿ ಇಬ್ಬರು ಕಾರ್ಮಿಕರಾದ ವೆಂಕಟೇಶ ರೆಡ್ಡಿ ಮತ್ತು ಇನ್ನೊಬ್ಬ, ಇವರಿಬ್ಬರ ದುರುಪಯೋಗದ ಫಲವಾಗಿ ಈ ಸಂಸ್ಥೆ ನಷ್ಟಕ್ಕೆ ಗುರಿಯಾಯಿತು ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇಬ್ಬರು ನೌಕರರ ದುರುಪಯೋಗದಿಂದ ನಷ್ಟಕ್ಕೆ ಗುರಿಯಾಗಿದೆ ಎಂದು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡುತ್ತಿದ್ದೇನೆ.

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾವು ಕಳೆದ ಸಾಲಿನಲ್ಲಿಯೂ ಈ ಸಭೆಯ ಮೂಲಕ ಕೇಳಿದ್ದೆವು. ಆ ಎಂ.ಡಿ ಯವರು ಪರ್ಚೇಸ್‌ನಲ್ಲಿ ಮತ್ತು ಇನ್ನೂ ಅನೇಕ ವಿಚಾರವಲ್ಲಿ ಭಾಗಿಯಾಗಿದ್ದಾರೆ. ಅವರ ಬಗ್ಗೆ ಮಾಹಿತಿಕೊಡಿ ಎಂದು ಕೇಳಿದ್ದೆವು. ಆದರೆ ಇವರು ಬೇರೆ ಯಾರೋ ಸಣ್ಣ ನೌಕರರ ತಪ್ಪೆಂದು ಇದರಲ್ಲಿ ತೋರಿಸುತ್ತಿದ್ದಾರೆ. ಅವರು ಎಂ.ಡಿ.ಯಾಗಿ ಬಂದಮೇಲೆ ಅನೇಕ ನೂನ್ಯತೆಗಳು ಇವೆ ಎಂಬುದನ್ನು ನಾವು ಸದನದ ಮೂಲಕ ತಮ್ಮನ್ನು ಕೇಳಿದ್ದೆವು. ಆದರೆ ಅವರು ಉತ್ತರ ಕೊಡುತ್ತೇವೆಂದು ಹೇಳಿದರೂ ಇದುವರೆಗೂ ಉತ್ತರ ಬಂದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಅಲ್ಲಿರತಕ್ಕಂಥ ಸಿಬ್ಬಂದಿ ಮತ್ತು ಇವರು ಮತ್ತೆ ಅದನ್ನು ವಿಸ್ತರಣೆ ಮಾಡುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಲಾಭ ಬರುವುದಕ್ಕೆ ಏನಾದರೂ ತೊಂದರೆ ಇದೆಯೇ? ಈ ಎಂ.ಡಿ.ಯವರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಏಕೆ ನಷ್ಟವಾಯಿತು ಎನ್ನುವುದಕ್ಕೆ ಉತ್ತರ ಕೊಟ್ಟಿದ್ದೇನೆ. ಯಾರಿಂದ ನಷ್ಟವಾಗಿದೆ ಎಂದು ಹೆಸರು ಸಹ ಹೇಳಿದ್ದೇನೆ. ಇದರ ವಿವರಗಳು ಬೇಕಾದರೆ ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ ಓದುತ್ತೇನೆ.

ಅಧ್ಯಕ್ಷರು:- ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಿ.

ಶ್ರೀ ಎ. ಕೃಷ್ಣಪ್ಪ:- ಅವರಿಬ್ಬರಿಂದ ಈ ರೀತಿ ಆಗಿದೆಯೆಂಬ ವಿವರಗಳಿವೆ. ಅದುದರಿಂದ. ನೇರವಾಗಿ ವಹಿವಾಟಿನಲ್ಲಿ ತಾನು ಮಾಡಿದಂಥ ಕಾರ್ಯಲೋಪದಿಂದ, ಹಣದ ದುರುಪಯೋಗದಿಂದ ಆ ಒಂದು ವರ್ಷದಲ್ಲಿ ಈ ಸಂಸ್ಥೆ ನಷ್ಟಕ್ಕೆ ಗುರಿಯಾಗಿದೆ. ವಿವರಗಳು ಬೇಕಾದರೆ ಕೊಡುತ್ತೇನೆ.

ಅಧ್ಯಕ್ಷರು:- ಪ್ರಶ್ನೋತ್ತರ ವೇಳೆ ಮುಗಿಯಿತು

(ಗೊಂದಲ)

ಪ್ರಕಟಣೆ

ಅಧ್ಯಕ್ಷರು:- ಶ್ರೀ ಆರ್.ವಿ. ದೇಶಪಾಂಡೆ, ವಿಧಾನಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ಬಸವರಾಜ ಪಾಟೀಲ್ ಅಟ್ಟೂರ್, ಶಾಸಕರು, ಇವರುಗಳನ್ನು ದಿನಾಂಕ ೧೨-೨-೯೩ ರಂದು ಬೆಳಿಗ್ಗೆ ೧೦.೧೦ ಗಂಟೆಗೆ ಬೆಂಗಳೂರಿನ ಸುಭಾಷ್‌ನಗರದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣದಲ್ಲಿ ಕರ್ನಾಟಕ ಪೋಲೀಸ್ ಶಾಸನದ ೭೧ರ ಕಲಮಿನ ಮೇರೆಗೆ ಬಂಧಿಸಿ ಅದೇ ದಿನ ೧೦.೫೫ ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಪೋಲೀಸ್ ಇನ್ಸ್‌ಪೆಕ್ಟರ್, ಉಪ್ಪಾರಪೇಟೆ ಪೋಲೀಸ್ ಠಾಣೆ, ಬೆಂಗಳೂರು ಸಿಟಿ ಹಾಗೂ ಶ್ರೀ ಪಿ.ಸಿ. ಸಿದ್ದನಗೌಡರ್, ಶಾಸಕರು, ಇವರನ್ನು ದಿನಾಂಕ ೧೩-೨-೯೩ರಂದು ಕಲಘಟಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣದಲ್ಲಿ ಮಧ್ಯಾಹ್ನ ೧.೫೦ ಗಂಟೆಗೆ ಕರ್ನಾಟಕ ಪೋಲೀಸ್ ಶಾಸನದ ೭೧ರ ಕಲಮಿನ ಮೇರೆಗೆ ಬಂಧಿಸಿ ಕೂಡಲೇ ಬಿಡುಗಡೆ ಮಾಡಲಾಯಿತೆಂದು ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಧಾರವಾಡ ಇವರುಗಳಿಂದ ಸಂದೇಶ ಬಂದಿರುತ್ತದೆ.

(ಗೊಂದಲ)

<u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ ೧೪-೨-೯೩ರಂದು ಲಿಖಿತ ಮೂಲಕ ಉತ್ತರಿಸುವ ೩೯ ಪಟ್ಟಿಯಲ್ಲಿರುವ ೨೭ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ ೪,೧೬೪,೨೯೭,೩೦೦,೪೬೩,೪೭೬ ಮತ್ತು ೬೨೧ನ್ನು ಹೊರತುಪಡಿಸಿ ಉಳಿದ ೨೦ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ಪರಿಹಾರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೨: (೭೬)
ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು)
ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೨ರ ನವೆಂಬರ್‌ನಲ್ಲಿ ಆದ ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ರೈತರ ಸಹಕಾರಸಂಘಗಳ ಅಲ್ಪಾವಧಿ ಸಾಲವನ್ನು ದೀರ್ಘವಾಧಿ ಸಾಲವೆಂದು ಪರಿವರ್ತಿಸಲು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ರೈತರಿಗೆ ಹೊಸ ಅಲ್ಪಾವಧಿ ಸಾಲವನ್ನು ಒದಗಿಸಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ
(ಸಹಾಕಾರ ಸಚಿವರಿಂದ)

ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದ ಪ್ರದೇಶಗಳಲ್ಲಿನ ರೈತರು ಸಹಾಕಾರ ಸಂಘಗಳಿಂದ ಪಡೆದ ಅಲ್ಪಾವಧಿ ಸಾಲವನ್ನು ನಬಾರ್ಡಿನ ಕೆಲವೊಂದು ಷರತ್‌ಗಳಿಗೆ ಒಳಪಟ್ಟು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ಅವಕಾಶವಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಸೂಕ್ತ ನಿರ್ದೇಶನ ನೀಡಿರುತ್ತದೆ.